

ಬರಬೇಕಂತ್ರಪ್ಪೋ..." ಅಂತೇಳಿ ಎರಡು ಸಲ ಮೈಕಿನಲ್ಲಿ ಅನೌನ್ಸ್ ಮಾಡಿದ. ಆಗ ಜನ ಪಂಚಾಯ್ತಿಯಲ್ಲಿ ಏನು ತೀರ್ಮಾನ ಆಗುತ್ತೊ ನೋಡಾನ ಅಂತೇಳಿ ನಿಧಾನಕ್ಕೆ ಪಂಚಾಯ್ತಿ ಕಟ್ಟೆಕಡೆ ಹಾದಿ ಹಿಡಿಯತೊಡಗಿದರು. ಆ ವಿಚಾರ ಮಾಳಿಗೆ ಹತ್ತಿ ಬರ್ಲು ಹಾಕುತ್ತಿದ್ದ ಮಂಜಣ್ಣನಿಗೂ ಕೇಳಿಸಿತ್ತು. ನಿನ್ನೆ ರಾತ್ರಿ ಹೊನ್ನೂರಪ್ಪನ ಮಗ ಜಯರಾಮನಿಗೆ ಅಡ್ವಾನ್ಸ್ ಕೊಟ್ಟು ಒಂದು ಗಾಡಿ ಕರ್ಲು ಹಾಕ್ಕೊಂಡು ಬಾರೊ ಅಂತ ಹೇಳಿದ್ದರಿಂದ ರಾತ್ರಿ ಮಳೆ ಬಂದು ನೆಲ ಮೆತುವಾಗಿರುವುದರಿಂದ ಕರ್ಲುಮಣ್ಣು ತರೋದು ತೆಗುವಾಗಲ್ಲ ಅಂತ ನಸುಕೀಲೆ ಎದ್ದುಹೋಗಿ ಹೊತ್ತುಹುಟ್ಟೊ ಹೊತ್ತಿಗೆ ಒಂದು ಗಾಡಿ ಕರ್ಲು ಏರಿಕೊಂಡು ಬಂದು ಮನೆಯಂಗಳದಲ್ಲಿ ಸುರುವಿ ಹೋಗಿದ್ದ. ಮನೆತುಂಬಾ ಜನ ಇದ್ದಿದ್ದರಿಂದ ತಲಾಕೊಂದು ಬುಟ್ಟಿ ಹೊತ್ತಾಕಿದರೆ ಆಗುತ್ತಂತ ಏಣಿ ಕಾಕ್ಕೊಂಡು ಮಾಳಿಗೆ ಹತ್ತಿದ ಮಂಜಣ್ಣ ಹುಲ್ಲು ಬೆಳೆದಿದ್ದನ್ನು ಕಿತ್ತಾಕಿ, ಎಲ್ಲೂ ನೀರು ನಿಲ್ಲದೆ ಅಲ್ಲಣದ ಕಡೆ ನೀರು ಹೋಗುವಂತೆ ವಾಟಾ ಮಾಡಿ ಕರ್ಲು ಹಾಕುತ್ತಿದ್ದ. ಇನ್ನೇನು ನಾಕು ಬುಟ್ಟಿ ಇತ್ತು ಅನ್ನುವಾಗ ಮೈಕಿನಲ್ಲಿ ಪಂಚಾಯ್ತಿ ಐತಂತ ಅನೌನ್ಸ್ ಮಾಡಿದ್ದು ಕೇಳಿ ಮುಶಿಣಿಯಲ್ಲೆ ನಕ್ಕ.

ಈ ಪಂಚಾಯ್ತಿ ನಿನ್ನೆ ಸಂಜೆಯೇ ನಡೆಯಬೇಕಿತ್ತು. ಆದರೆ ಮಕ್ಕತ್ಲಾಗುವ ಹೊತ್ತಿಗೆ ಆರಂಭವಾದ ಗಾಳಿ ಮತ್ತು ಮಳೆ ಜಿದ್ದಿಗೆ ಬಿದ್ದವರಂತೆ ತಮ್ಮ ಪ್ರತಾಪ ತೋರಿಸಿದ್ದರಿಂದ ಜೋರಾಗಿ ಬೀಸಿದ ಗಾಳಿಗೆ ಅಲ್ಲಾಡಿಹೋದ ಅಳ್ಳೆದೆಯ ಗಿಡಮರಗಳೆಲ್ಲ ಬುಡಮೇಲಾದ ಕಾರಣ ಲೈನ್ ಕಟ್ಟಾಗಿ ಕರೆಂಟು ತೆಗೆದಿದ್ದರು. ಆಗ ಇರುಳಿಗೆ ಮತ್ತಷ್ಟು ಮತ್ತೇರಿದಂತಾಗಿ ಕತ್ತಲು ಗಾಢವಾಗತೊಡಗಿತ್ತು. ಊರಿಗೆ ಊರೇ ಕತ್ತಲಿನಲ್ಲಿ ಮುಳುಗಿತ್ತು. ಆ ಕತ್ತಲನ್ನೋಡಿಸುವ ಒತ್ತಾಸೆಗೆ ಒತ್ತುಕೊಟ್ಟ ಮಿಣುಕು ದೀಪಗಳ ಬೆಳಕು, ಕದ ಮುಚ್ಚಿದ ಮುಂದ್ಲು ಕೋಣೆಯನ್ನೂ ದಾಟಿ ಮನೆಯಂಗಳವನ್ನು ಬೆಳಗುತ್ತಿದ್ದವು. ಮಿಂಚಿದರೆ ಮಾತ್ರ ಮುಂದಿನ ಮನುಷ್ಯ ಕಾಣುವಂತಿದ್ದ ಕಾನುಗತ್ತಲು ಕವಿದಿರುವುದರ ಜೊತೆಗೆ ಊರಿನ ಉತ್ತರ ದಿಕ್ಕಿಗಿನ್ನೂ